ವಾಸ್ತು ವಿನ್ಯಾಸ



# ನಿಮ್ಮ ಮನೆ ಬಾಗಿಲು ಯಾವ ದಿಕ್ಕಿಗಿದೆ?

★ ಪ್ರವೀಣ ಕುಲಕರ್ಣಿ

ವಾಸ್ತು ಎನ್ನುವುದು ಇವತ್ತು ಸರ್ವಾಂತರ್ಯಾಮಿ. ಬ್ರಿಟನ್ನಿನ ಪ್ರಧಾನಿಯಾಗಿದ್ದ ಟೋನಿ ಬ್ಲೇರ್ ಅವರೇ ನಂ.10 ಡೌನಿಂಗ್ ಸ್ಟ್ರೀಟ್‌ನ ತಮ್ಮ ಅಧಿಕೃತ ನಿವಾಸವನ್ನು ವಾಸ್ತು ಶಾಸ್ತ್ರಕ್ಕೆ ತಕ್ಕಂತೆ ಮಾರ್ಪಾಟು ಮಾಡಿದ್ದರು. ಬಾಗಿಲು, ಕಿಟಕಿಗಳು, ಅವುಗಳು ಇರಬೇಕಾದ ಸ್ಥಳ, ಅವುಗಳಿಗೆ ಬಳಸುವ ಬಣ್ಣ ಎಲ್ಲವನ್ನೂ ವಾಸ್ತು ಶಾಸ್ತ್ರಜ್ಞರ ತಂಡವೇ ನಿರ್ಧರಿಸಿತ್ತು. ಬ್ಲೇರ್ ಜೀವನದಲ್ಲಿ ಕಾಣೆಯಾಗಿದ್ದ ನೆಮ್ಮದಿ ಆಮೇಲೆ ಮರುಸ್ಥಾಪನೆ ಆಯಿತಂತೆ!

ಬರೀ ಮನೆಯ ಬಾಗಿಲಿನ ದಿಕ್ಕನ್ನು ಮಾತ್ರ ನಿರ್ಧರಿಸುವುದಲ್ಲ; ವಾಸ್ತು ತಜ್ಞರು ಮನೆಯ ಹಲವಾರು ವಿಷಯಗಳ ಬಗ್ಗೆ ಹೀಗೆಯೇ ಇರಬೇಕೆಂದು ಸಲಹೆ ನೀಡುತ್ತಾರೆ. 'ದಕ್ಷಿಣದ ಕಡೆ ತಲೆ ಮಾಡಿಕೊಂಡು ಮಲಗಲು ಅನುಕೂಲ ಆಗುವಂತೆ ಬೆಡ್‌ರೂಮ್ ರೂಪಿಸಬೇಕು; ವಿದ್ಯಾರ್ಥಿಗಳು ಓದುವಾಗ ಪೂರ್ವ ದಿಕ್ಕಿಗೆ ಮುಖ ಮಾಡಿಕೊಂಡು ಕೂಡಬೇಕು. ಅಡುಗೆ ಮನೆಯ ಆಗ್ನೇಯ ದಿಕ್ಕಿನಲ್ಲಿ ಒಲೆಯನ್ನೂ ಈಶಾನ್ಯ ದಿಕ್ಕಿನಲ್ಲಿ ನೀರನ್ನೂ ಇಡಬೇಕು. ಗಿಡ–ಮರಗಳನ್ನು ಪಶ್ಚಿಮ ದಿಕ್ಕಿನಲ್ಲಿ ಬೆಳೆಸಬೇಕು. ಸ್ಟೇರ್ ಕೇಸ್‌ನ ಮುಖ ಉತ್ತರ ಇಲ್ಲವೆ, ಪೂರ್ವ ದಿಕ್ಕಿನ ಕಡೆಗೆ ಇರಬೇಕು' ಮುಂತಾಗಿ ನೂರೆಂಟು ಸಲಹೆಗಳು ಕೇಳಿ ಬರುತ್ತವೆ.

ವಾಸ್ತುವನ್ನು ನಂಬದೇ ನೆಮ್ಮದಿಯಾಗಿ ಇರುವವರು ಸಾಕಷ್ಟು ಜನರಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಬಹುತೇಕ ಮನೆಗಳ ನಿರ್ಮಾಣದಲ್ಲಿ ವಾಸ್ತು ಮುಖ್ಯ ಪಾತ್ರ ವಹಿಸುತ್ತಿದೆ ಎನ್ನುವುದೂ ಮುಖ್ಯ. ವಾಸ್ತುವನ್ನು ನಂಬದವರೂ ಸಹಾ, 'ಒಳ್ಳೆಯದಾಗುವುದಾದರೆ ಆಗಲಿ. ಸುಮ್ಮನೇ ತೊಂದರೆಗೆ ಒಳಗಾಗುವುದು ಏಕೆ?' ಎಂದೇ ವಾಸ್ತು ಪ್ರಕಾರ ಮನೆ ಕಟ್ಟಿಸುತ್ತಿದ್ದಾರೆ.

ಏನಿದು ವಾಸ್ತು? ಇಲ್ಲಿಯವರೆಗೆ ಇದು ಎಲ್ಲಿತ್ತು? ಇತ್ತೀಚೆಗಷ್ಟೇ ಇದು ಇಷ್ಟೊಂದು ಅನಿವಾರ್ಯವಾಗಲು ಕಾರಣಗಳೇನು? ಇದಕ್ಕೇನಾದರೂ ವೈಜ್ಞಾನಿಕ ಹಿನ್ನೆಲೆ ಇದೆಯೆ?

ಮುಂಬೈನಲ್ಲಿ ವಾಸವಿರುವ ವಾಸ್ತುತಜ್ಞ ಅನಂತರಾಮ ಭಟ್ಟ ಅವರು, 'ಭೂಮಿಯ ಗುರುತ್ವಾಕರ್ಷಣೆ ಶಕ್ತಿಯಿಂದ ಧನಾತ್ಮಕ ಅಂಶಗಳನ್ನು ಮನೆಯತ್ತ ಸೆಳೆಯುವ ಸಲುವಾಗಿಯೇ ಪ್ರಧಾನ ದ್ವಾರವನ್ನು ಈಶಾನ್ಯ, ಉತ್ತರ ಇಲ್ಲವೇ ಪೂರ್ವ ಭಾಗದಲ್ಲಿ ಸ್ಥಾಪಿಸಬೇಕು. ಈಶಾನ್ಯ ದಿಕ್ಕು ಯಾವಾಗಲೂ ಶಕ್ತಿಯನ್ನು ಪ್ರವಹಿಸುವಂತೆ ಮಾಡುತ್ತದೆ. ಪ್ರಕೃತಿಯಿಂದ ಒದಗುವ ಈ ಬಲವು ಪ್ರಗತಿಗೆ ಪೂರಕವಾಗಿರುತ್ತದೆ. ಈಶಾನ್ಯ ದಿಕ್ಕಿನಲ್ಲಿ ಪ್ರಧಾನ ದ್ವಾರ ಇರಬೇಕೆಂಬ ಸಲಹೆಗೆ ಈ ಸಂಗತಿಯೇ ಮುಖ್ಯ ಕಾರಣ. ಬಾಗಿಲ ಮುಂದೆ ಜಲ ಮೂಲ ಇರುವುದು ಒಳ್ಳೆಯದಲ್ಲ. ಇದರಿಂದ ಅಪಾಯವೇ ಹೆಚ್ಚು. ಮಳೆ ನೀರು ಪಶ್ಚಿಮದಿಂದ ಪೂರ್ವಕ್ಕೆ ಅಥವಾ ಉತ್ತರದಿಂದ ದಕ್ಷಿಣಕ್ಕೆ ಹರಿಯುವಂತೆ ಮಾಳಿಗೆಯನ್ನು ರೂಪಿಸಬೇಕು' ಎನ್ನುತ್ತಾರೆ. ಮೂಲತಃ ಹೊಸನಗರ ತಾಲ್ಲೂಕಿನ ಅನಂತರಾಮ ಭಟ್ಟರು, ಕೊಳವೆ ಬಾವಿಯನ್ನು ತೋಡಿಸಲು ಖಚಿತವಾಗಿ ನೀರಿನ ಮೂಲವನ್ನು ತೋರಿಸುವ ಕೌಶಲ ಹೊಂದಿದ್ದು ಜನಪ್ರಿಯರಾದವರು.

ಸಾಗರದ ದಂಡೆಯಲ್ಲಿ ಇರುವವರು ಪಶ್ಚಿಮಕ್ಕೇ ಮುಖ ಮಾಡಿ ಮನೆ ಕಟ್ಟುತ್ತಾರಲ್ಲ?

'ಹೌದು. ವಿಶೇಷವಾಗಿ ಗೋವಾದಲ್ಲಿ ಮುಖ್ಯದ್ವಾರ ಪಶ್ಚಿಮಾಭಿಮುಖವಾಗಿ ಅಳವಡಿಸಲು ವಾಸ್ತುತಜ್ಞರೇ ಸೂಚಿಸುತ್ತಾರೆ. ಕೇರಳದ ಕಡೆ ಹೋದರೆ ಅವರ ಯೋಚನಾಲಹರಿಯೇ ಬೇರೆಯಾಗಿದೆ. ಚೀನಾದಲ್ಲಿ ದಕ್ಷಿಣವೇ ಶ್ರೇಷ್ಠ ದಿಕ್ಕು ಎನ್ನುವ ನಂಬಿಕೆ ಇದೆ. ಸ್ಥಳೀಯ ವಾತಾವರಣದ ಅಗತ್ಯಗಳಿಗೆ ತಕ್ಕಂತೆ ವಾಸ್ತುಶಾಸ್ತ್ರದಲ್ಲಿ ಭಿನ್ನ ಮಾರ್ಗಸೂಚಿಗಳಿವೆ' ಎನ್ನುತ್ತಾರೆ.

'ಮನೆಯಲ್ಲಿ ಬಳಸುವ ಬಣ್ಣಗಳೂ ಮನೆಯ ವಾತಾವರಣದ ಮೇಲೆ ಪರಿಣಾಮ ಬೀರುತ್ತವೆ. ಆದ್ದರಿಂದ ತಜ್ಞರ ಸಲಹೆಯನ್ನು ಪಡೆದುಕೊಂಡೇ ಬಣ್ಣದ ಸಂಯೋಜನೆ ನಿರ್ಧರಿಸಬೇಕು. ಆದರೆ ಪ್ರಧಾನ ಬಾಗಿಲ ಮುಂದೆ ಯಾವುದೇ ಅಡೆತಡೆಗಳು ಇರಬಾರದು' ಎನ್ನುವುದು ಅವರ ಸಲಹೆ.

'ಇತ್ತೀಚೆಗೆ ವಾಸ್ತುತಜ್ಞರ ಸಲಹೆ ಕೇಳಿ ಮನೆಗಳನ್ನು ಒಡೆದು ಕಟ್ಟುವವರ ಸಂಖ್ಯೆ ಹೆಚ್ಚಾಗಿದೆಯಲ್ಲ? ಇದರಿಂದ ಜನರಿಗೆ ತೊಂದರೆಯೇ ಹೆಚ್ಚಾಗಿದೆಯಲ್ಲ?' ಎಂದು ಪ್ರಶ್ನಿಸಿದರೆ, 'ವಾಸ್ತುದೋಷ ಸರಿಪಡಿಸಲು ಮನೆಯನ್ನು ಕೆಡವಿ, ಕಟ್ಟಬೇಕಾದ ಅಗತ್ಯ ಇಲ್ಲ. ಹಾಗೆಯೇ ದೋಷದೊಂದಿಗೆ ಬದುಕುವುದೂ ತರವಲ್ಲ. ಇದ್ದ ವ್ಯವಸ್ಥೆಯಲ್ಲಿ ದೋಷ ಪರಿಹಾರಕ್ಕೆ ಸೂಕ್ತ ಮಾರ್ಗ ಕಂಡುಕೊಳ್ಳಬೇಕಷ್ಟೇ. ಪೃಥ್ವಿ, ಜಲ, ಅಗ್ನಿ, ವಾಯು ಹಾಗೂ ಆಕಾಶ ಈ ಪಂಚ ಮಹಾಭೂತಗಳೇ ಎಲ್ಲದಕ್ಕೂ ಪ್ರಮುಖ ಕಾರಣ. ಇವುಗಳ ಮಧ್ಯೆ ಅಸಂತುಲನ ಉಂಟಾಗದಂತೆ ನೋಡಿಕೊಳ್ಳಬೇಕು' ಎನ್ನುವುದು ಅವರ ಸಲಹೆ.

'ಹಿಂದಿನ ಕಾಲದಲ್ಲಿ ಈ ವಾಸ್ತು ಇಲ್ಲದಿದ್ದಾಗ ಜನರು ನೆಮ್ಮದಿಯಾಗಿ ಇರಲಿಲ್ಲವೆ?' ಎಂದು ಪ್ರಶ್ನಿಸಿದರೆ, 'ಹಿಂದಿನವರು ಅಗತ್ಯಕ್ಕೆ ತಕ್ಕಷ್ಟು ಮನರಂಜನೆಯ ಕಾರ್ಯದಲ್ಲಿ ತೊಡಗಿರುತ್ತಿದ್ದರು. ಸಪ್ತ ಸ್ವರಗಳ ಲಯಬದ್ಧ, ತಾಳಬದ್ಧ, ರಾಗಬದ್ಧ ಸಂಗೀತವನ್ನು ಕೇಳುತ್ತಿದ್ದರು. ಈಗ ಉನ್ಮಾದ ಸಂಗೀತ, ಮನೆ ಹಾಳು ಧಾರಾವಾಹಿಗಳು, ಒಂದಕ್ಕೆ ನಾಲ್ಕು ಸೇರಿಸಿ ಸಂಶಯ ಹುಟ್ಟಿಸುವ ಸಮಾಚಾರಗಳ ಗುಂಗಿನಲ್ಲೇ ನಾವೆಲ್ಲ ಇರುವುದರಿಂದ ಶರೀರದ ಆಕಾಶ ತತ್ವ ಹಾಗೂ ಬಾಹ್ಯಾಕಾಶ ಮಲಿನವಾಗಿದೆ. ಇದರಿಂದ ಮನೆಯಲ್ಲಿ ಕಲಹ, ಗಂಡ–ಹೆಂಡಿರಲ್ಲಿ ವಿರಹ, ವಿವಾಹ ವಿಚ್ಛೇದನ ಮೊದಲಾದ ಸಾಮಾಜಿಕ ಸಮಸ್ಯೆಗಳನ್ನು ನಾವೀಗ ಪ್ರತ್ಯಕ್ಷವಾಗಿ ಕಾಣುತ್ತಿದ್ದೇವೆ' ಎನ್ನುವ ವಾದವನ್ನು ಇವರು ಮಂಡಿಸುತ್ತಾರೆ.

'ವೇದದಲ್ಲಿ ವಿಜ್ಞಾನ ಎಂದರೆ ಸಂಪೂರ್ಣ ಜ್ಞಾನಕ್ಕೆ ಬುನಾದಿ. ಪರಮಾನಂದದ ಮೊದಲ ಹಂತ. ವಿಜ್ಞಾನಿಗಳ ವ್ಯಾಖ್ಯೆಯಲ್ಲಿ ವಿಜ್ಞಾನವೆಂದರೆ ಪರಿವರ್ತನೆ ಹೊಂದುವುದು, ಕಾಲಕಾಲಕ್ಕೆ ಆವಿಷ್ಕಾರ ಆಗುವಂತಹದ್ದು. ಇಲ್ಲಿ ಅಭಿಪ್ರಾಯ ಭೇದವಿದೆ' ಎನ್ನುವುದನ್ನೂ (ವಿವರಗಳಿಗೆ: 09869344425) ಅವರು ಒಪ್ಪುತ್ತಾರೆ.



ವಾಸ್ತು ಸಲಕರಣೆಗಳು